<u>ದಿನಾಂಕಃ 02-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ 2 ನೇ ಆರೋಪಿಯ ಪರ ವಕೀಲರಿಂದಃ</u>

ಕಮಲನಾಯಕನ ತಾಂಡ್ಯ ನೆರಳಗುಡ್ಡ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆ. ನಮ್ಮ ತಾಂಡ್ಯದ ಗ್ರಾಮಪಂಚಾಯತಿಯ ಸದಸ್ಯರ ಹೆಸರು ವಸಂತಬಾಯಿ. ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲಿ ದೇವಸ್ಥಾನ ಮತ್ತು ಪಂಚಾಯತಿ ಕಟ್ಟೆ ಇರುತ್ತದೆ ಅಂದರೆ ಸರಿ. ಸಾಮಾನ್ಯವಾಗಿ ಪಂಚಾಯತಿಯನ್ನು ಪಂಚಾಯತಿ ಕಟ್ಟೆಯಲ್ಲಿ ಹಿರಿಯರು ಮತ್ತು ಪಂಚಾಯತಿ ಮೆಂಬರ್ ಮಾಡುತ್ತಾರೆ ಅಂದರೆ ಸರಿ . ಈ ಪ್ರಕರಣದಲ್ಲಿ ಪಂಚಾಯತಿಯನ್ನು ಮಾಡಲು ದೇವಸ್ಥಾನದ ಹತ್ತಿರ ಮಾಡಿರುವುದಿಲ್ಲ, ಮನೆಯ ಬಳಿ ಮಾಡಿರುತ್ತೇವೆ. ಲಾಲ ನಾಯ್ಕ , ಕಮಲನಾಯ್ಕ ಮತ್ತು ನನಗೂ ವಿಶ್ವಾಸವಿದೆ ಮತ್ತು ಲೇವಾದೇವಿ ಮಾಡುತ್ತೇವೆ ಮತ್ತು ಒಂದೇ ಪಾರ್ಟಿಯಲ್ಲಿ ಇರುತ್ತೇವೆ ಅಂದರೆ ಸರಿಯಲ್ಲ. ನಾನು ಪಿರ್ಯಾದಿಯನ್ನು ನೀಡುವ ಸಮಯದಲ್ಲಿ ನನ್ನ ಜೊತೆಗೆ ಸೇವಾ ನಾಯಕ, ಕಮಲನಾಯಕ, ಚಂದ್ರನಾಯಕ , ಬಾಬ್ಲ ನಾಯಕ ಇದ್ದರು. ಪೊಲೀಸರು ನನ್ನ ಹೇಳಿಕೆಯ ಪ್ರಕಾರ ದೂರನ್ನು ತಯಾರಿಸಿರುತ್ತಾರೆ. ಮೇಲೆ ಹೇಳಿದವ್ಯಕ್ತಿಗಳು ಯಾರು ನನ್ನ ಜೊತೆ ದೂರು ನೀಡುವ ಸಮಯದಲ್ಲಿ ಬಂದಿರಲಿಲ್ಲ ಅಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಡುವ ಮೊದಲು ನಾನು ಮತ್ತು ಪೊಲೀಸರು ಮೊದಲು ಮಾತನಾಡಿ ನಂತರ ಕೊಟ್ಟೆನು ಅಂದರೆ ಸರಿಯಲ್ಲ.

ನಾನು ದೂರನ್ನು ನೀಡಿದ ಮರುದಿನ ಸಂಜೆ ಸುಮಾರು 4 ಗಂಟೆಗೆ ಪೊಲೀಸರು ಬಂದರು. ನಾನು ಸದರಿ ದಿನ ಸದರಿ ಸಮಯದಲ್ಲಿ ಪೊಲೀಸರ ಜೊತೆಗೆ ಇದ್ದೆ ಅಂದರೆ ಸರಿ. ಸ್ಥಳದಲ್ಲಿ ಸುಮಾರು ಜನ ಸೇರಿದ್ದರು ಅಂದರೆ ಸರಿ. ಚುನಾವಣೆಯಲ್ಲಿ ವಸಂತಬಾಯಿಗೆ ವಿರುದ್ದವಾಗಿ ನಾನು ಕೆಲಸ ಮಾಡಿದೆ ಅಂದರೆ ಸರಿಯಲ್ಲ. ರಾಜನಾಯಕ, ರವಿಚಂದ್ರನಾಯಕ ಮತ್ತು ಆತನ ಹೆಂಡತಿ ವಸಂತಬಾಯಿರವರಿಗೆ ಸಪೋರ್ಟ್ ಮಾಡಿದರು ಅಂದರೆ ನನಗೆ ಗೊತ್ತಿಲ್ಲ. ರಾಜನಾಯಕ, ರವಿಚಂದ್ರನಾಯಕ ಮತ್ತು ಅವರ ತಂಗಿಯನ್ನು ಚಂಗನಹಳ್ಳಿಯ ಚಳ್ಳಕೆರೆಯಲ್ಲಿ ಇರುವ ಅವರ ದೊಡ್ಡಮ್ಮ ಸಾಕಿ ಬೆಳೆಸಿದರು ಅಂದರೆ ಸರಿ. ಆ 3 ಜನರಿಗೆ ಕಮಲನಾಯಕನತಾಂಡ್ಯಕ್ಕೆ ಬಂದರೆ ಮಾತ್ರ ನಿಮಗೆ ಜಮೀನು ಕೊಡುತ್ತೇವೆ ಎಂದು ಹೇಳಿದಾಗ ಮಾತ್ರ ಕಮಲನಾಯಕನತಾಂಡ್ಯಕ್ಕೆ ಬಂದರು ಅಂದರೆ ಸರಿಯಲ್ಲ . ರಾಜನಾಯಕ, ರವಿಚಂದ್ರನಾಯಕ ರವರು ಓದಿರುವುದಿಲ್ಲ ಅಂದರೆ ಸರಿ. ನಾನು ಎಸ್ ಎಸ್ ಎಲ್ ಸಿಯವರಿಗೆ ಓದಿದ್ದು ಮತ್ತು ರಾಜಕೀಯದಲ್ಲಿ ಓಡಾಡುವುದರಿಂದ ಪೊಲೀಸ್ ಠಾಣೆಗೆ ಹೋಗಿ ಬರುತ್ತಿದ್ದೆ ಅಂದರೆ ಸರಿಯಲ್ಲ. ರಾಜನಾಯಕ ಮತ್ತು ರವಿಚಂದ್ರನಾಯಕರವರು ದೊಡ್ಡಮ್ಮನ ಬಳಿ ಇದ್ದಾಗಲಿನಿಂದಲೂ ಸಹ ಅವರ ಜಮೀನನ್ನು ಲಪಾಟಾಯಿಸಬೆಕೇಂದು ಕೊಂಡಿದ್ದೆ ಅಂದರೆ ಸರಿಯಲ್ಲ. ನಾನು ಮತ್ತು ಲಾಲನಾಯ್ಕ ,ಕಮಲನಾಯ್ಕ ರವರು ಸೇರಿ ಏನಾದರೂ ಮಾಡಿ ಅವರ ಜಮೀನು ಲಪಟಾಯಿಸಬೇಕೆಂದು ಅವರ ವಿರುದ್ದ ಸುಳ್ಳು ದೂರು ದಾಖಲಿಸಿದ್ದೇನೆ ಅಂದರೆ

ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರು ನಾನು ಪೊಲೀಸರ ಜೊತೆ ಶಾಮಿಲಾಗಿ ಸುಳ್ಳು ಕೇಸು ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ .

(ಈ ಹಂತದಲ್ಲಿ 2 ನೇ ಆರೋಪಿ ಯ ಪರ ವಕೀಲರ ವಿನಂತಿಯ ಮೇರೆಗೆ ಉಳಿದ ಪಾಟೀ ಸವಾಲನ್ನು 1 ನೇಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೂಳ್ಳಲಾಯಿತು. )

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು